# ಅಜ್ಞಾತ ಶ್ರೀರಾಮಕೃಷ್ಣರು

ಸ್ವಾಮಿ ಭಜನಾನಂದ



**ಕಾಲಾತೀತ ಆರಾಧನೆ**

ಪಶ್ಚಿಮ ಆಗಸದಂಚಿನಲ್ಲಿ ಸೂರ್ಯ ಮುಳುಗುವಾಗ, ಕವಿಯುವ ಮಬ್ಬಿನಲ್ಲಿ ನೆರಳುಗಳು ದಟ್ಟೈಸಿ ಒಂದಾಗುವಾಗ, ದಿಗಂತದಿಂದ ಹೊಮ್ಮಿದ ನಿತಾಂತ ಮೌನ ಸಂಧ್ಯಾರಾಗವು ದೀಪ್ತವಾದ ಜಗತ್ತಿನ ಮೇಲೆ ಆವರಿಸಿದಾಗ, ಶ್ರೀರಾಮಕೃಷ್ಣ ಎಂಬ ಪ್ರಖ್ಯಾತ ಚೇತನದ ಆರಾಧನಾರೂಪವಾಗಿ ನೂರಾರು ಆಶ್ರಮಗಳಲ್ಲಿ ಮತ್ತು ಸಾವಿರಾರು ಮನೆಗಳಲ್ಲಿ ಸರಳವಾದ ಆಚರಣೆಯೊಂದು ನಡೆಯುತ್ತದೆ. ಅವರ ಅದೃಶ್ಯ ಸಾನ್ನಿಧ್ಯಕ್ಕೆ ಮೀಸಲಾದ ವಿಶೇಷವಾದ ಒಂದು ಕೊಠಡಿಯಲ್ಲಿ ಅಥವಾ ಕೊಠಡಿಯ ಮೂಲೆಯಲ್ಲಿ ಧೂಪಾರತಿ ಸಲ್ಲಿಸಲಾಗುತ್ತದೆ; ಆಗಾಗ ಸ್ತವನ, ಪ್ರಾರ್ಥನೆಗಳು, ಸ್ತೋತ್ರಗಳನ್ನು ಸಾಮೂಹಿಕವಾಗಿ ಹಾಡಲಾಗುತ್ತದೆ.

ಧಾರ್ಮಿಕ ಆಚರಣೆ ಎಂಬುದು ಒಂದು ಪವಿತ್ರವಾದ ಕ್ರಿಯೆ. ಅದರ ಹಿಂದೆ ಪವಿತ್ರಕಾರಕ ಸಾಧನವೊಂದಿದ್ದು ಅದು ಶತಶತಮಾನಗಳವರೆಗೆ ಉಳಿದುಕೊಂಡು ಬಂದಿರುತ್ತದೆ. ಇಂಥ ಆಚರಣೆಗಳ ಮೂಲಕ ಹಿಂದಿನ ಘಟನೆಗಳು ಭಕ್ತರ ಮನಸ್ಸುಗಳಲ್ಲಿ ಪುನಃಸೃಷ್ಟಿಗೊಳ್ಳುತ್ತವೆ; ಅವರು ಹೊಸದಾಗಿ ದೈವೀ ಪ್ರಕ್ರಿಯೆಯನ್ನು ಕಂಡುಕೊಳ್ಳುತ್ತಾರೆ. ಭಕ್ತರು ಶ್ರೀರಾಮ ಕೃಷ್ಣರನ್ನು ತಮ್ಮ ತಮ್ಮ ಮನೆಗಳಲ್ಲಿ ಪೂಜಿಸಿದಾಗ ಅಥವಾ ಆರತಿ ಬೆಳಗಿದಾಗ, ಅಂಥ ಎಲ್ಲ ಪೂಜಾಸ್ಥಾನಗಳೂ, ಒಂದು ಅನುಭಾವಿಕವಾದ ಅರ್ಥದಲ್ಲಿ, ದಕ್ಷಿಣೇಶ್ವರ ದೇವಾಲಯದ ತೋಟದಲ್ಲಿನ ಅವರ ಕೊಠಡಿಯಾಗಿ ಪರಿಣಮಿಸುತ್ತವೆ. ಭಕ್ತರ ನಂಬಿಕೆಯಂತೆ, ಶ್ರೀರಾಮಕೃಷ್ಣರು ಪ್ರತಿನಿತ್ಯವೂ ಅವರ ಪೂಜೆಯನ್ನು ಸ್ವೀಕರಿಸುವಾಗ ಕಾಲ ಸ್ತಬ್ಧವಾಗುತ್ತದೆ ಮತ್ತು ಇತಿಹಾಸ ಅತೀತವಾಗುತ್ತದೆ. ಶಾಶ್ವತವಾದ 'ವರ್ತಮಾನ'ವೊಂದೆ ಆಗ ಅಲ್ಲಿ, ಆ ಕ್ಷಣದಲ್ಲಿ, ಅಸ್ತಿತ್ವದಲ್ಲಿರುತ್ತದೆ. ಧಾರ್ಮಿಕ ಆಚರಣೆಗಳ ಮೂಲಕ ಶ್ರದ್ಧೆ ಉಂಟುಮಾಡುವ ಪವಾಡ ಇಂತಹುದು.

ಆದರೂ ಧಾರ್ಮಿಕ ಆಚರಣೆ ಎಂಬುದು ಜೀವಾತ್ಮದ ಕಾಲಾತೀತ ಅಭೀಪ್ಸೆಯ ವಿಸ್ತಾರದಲ್ಲಿ ಒಂದು ತಾತ್ಕಾಲಿಕ ಅಭಿವ್ಯಕ್ತಿ ಮಾತ್ರ. ಜನ್ಮಜನ್ಮಾಂತರದುದ್ದಕ್ಕೂ, ದಾರಿಗಾಣದ ಶತಮಾನಗಳುದ್ದಕ್ಕೂ, ಮಾನವ ಅರಿತೋ ಅರಿಯದೆಯೋ ಒಂದಲ್ಲ ಒಂದು ರೂಪದಲ್ಲಿ ದೈವೀಶಕ್ತಿಯನ್ನು ಆರಾಧಿಸುತ್ತ ಬಂದಿದ್ದಾನೆ. ಜೀವಾತ್ಮದ ಈ ಕಾಲಾತೀತ ಅಭೀಪ್ಸೆಗೆ ಪ್ರತಿಕ್ರಿಯೆಯಾಗಿಯೋ ಎಂಬಂತೆ ದೈವೀಶಕ್ತಿಯು ಭೂಮಿಯ ಮೇಲೆ ಮತ್ತೆ ಮತ್ತೆ ಅವತರಿಸುತ್ತದೆ. ಭಗವಂತನಿಗಾಗಿ ಹಾತೊರೆಯುವ ಜೀವಿಯು ಈ ಅವತಾರಗಳನ್ನು ಆಶ್ರಯಿಸಿ, ತನ್ನ ಜೀವನಕ್ಕೆ ಹೊಸತೊಂದು ಅರ್ಥವನ್ನೂ, ಗುರಿಯನ್ನೂ ಕಂಡುಕೊಳ್ಳಲು ಪ್ರಯತ್ನಿಸುತ್ತಾನೆ. ಅವತಾರಪುರುಷರು ಆಡುವ ಪ್ರತಿಯೊಂದು ಮಾತೂ ಬೆಳಕಿನ ಒಂದು ಸಂದೇಶವಾಗಿ, ಮಾಡುವ ಒಂದೊಂದೂ ಸಂಜ್ಞೆಯೂ ಆಸೆಯ ಭರವಸೆಯಾಗಿ, ತೊಡಗುವ ಒಂದೊಂದೂ ಪವಿತ್ರ ಕರ್ಮವಾಗಿ, ನಡೆದಾಡುವ ಒಂದೊಂದು ಸ್ಥಳವೂ ತೀರ್ಥಕ್ಷೇತ್ರವಾಗಿ ಪರಿಣಮಿಸುತ್ತದೆ. ಅದು ಹಿಂದಿನ ಎಲ್ಲ ಮಹಾನ್ ಅವತಾರಗಳ—ರಾಮ ಮತ್ತು ಕೃಷ್ಣ, ಬುದ್ಧ ಮತ್ತು ಕ್ರಿಸ್ತ—ಬಗೆಗೆ ನಿಜವಾಗಿತ್ತು; ಈಗ ಶ್ರೀರಾಮಕೃಷ್ಣರ ವಿಷಯದಲ್ಲೂ ಅದು ನಿಜವಾಗಿದೆ.

ಭಗದವತರಣಕ್ಕೆ ಎರಡು ಮುಖಗಳು: ಒಂದು ಚಾರಿತ್ರಿಕ ಅಥವಾ ತಾತ್ಕಾಲಿಕ, ಇನ್ನೊಂದು ಅತೀತ ಮತ್ತು ಶಾಶ್ವತ. ಶ್ರೀರಾಮಕೃಷ್ಣರ ಜೀವನ ಚರಿತ್ರೆಯ ಅಧ್ಯಯನ ಅವರ ಸ್ವರೂಪದ ಮೊದಲನೆಯ ಮುಖದ ಅರಿವನ್ನಷ್ಟೆ ನಮಗಿತ್ತರೆ, ಎರಡನೆಯ ಮುಖ ನಮಗೆ ಅವ್ಯಕ್ತವಾಗಿದ್ದು, ಅವರ ನೇರ ಸ್ವ–ಪ್ರಕಾಶನದಿಂದಷ್ಟೆ ವ್ಯಕ್ತವಾಗಬಲ್ಲುದಾಗಿದೆ. ಈ ಎರಡೂ ಮುಖಗಳನ್ನು ಪರಿಗಣಿಸಬೇಕೆಂಬುದನ್ನು ಸೂಚಿಸುವ ಪ್ರಕೃತ ಲೇಖನವನ್ನು ಬರೆದಿರುವ ಪೂಜ್ಯ ಸ್ವಾಮೀಜಿಯವರು ರಾಮಕೃಷ್ಣ ಮಹಾಸಂಘದ ಸಹಾಯಕ ಕಾರ್ಯದರ್ಶಿಗಳಲ್ಲೊಬ್ಬರು. ಇವರು ಶ್ರೇಷ್ಠ ಅನುಭಾವಿಗಳು ಮತ್ತು ವಿದ್ವಾಂಸರು. **ಅನುವಾದ:** ಡಾ. ಸಿ.ಪಿ.ಕೆ.

**ಶ್ರೀರಾಮಕೃಷ್ಣರೆಂದರೆ ಯಾರು? ಜೀವಿಯಾಗಿ ಭಗವಂತನ ಅಭಿವ್ಯಕ್ತಿ. ಆದರೆ ಆ ಅಭಿವ್ಯಕ್ತಿಯ ಹಿಂದೆ ಭಗವಂತನ ಅನಂತ ಅಮೂರ್ತತೆ ಮತ್ತು ಸರ್ವವ್ಯಾಪಕ ಮೂರ್ತತೆ ಇದೆ. ಶ್ರೀರಾಮಕೃಷ್ಣರ ಜೀವನದಲ್ಲಿ, ಇತ್ತೀಚಿನ ವಿಶಿಷ್ಟ ಉದಾಹರಣೆಯಾಗಿ, ನಾವು ಆ ಆಧ್ಯಾತ್ಮಿಕ ಶಕ್ತಿಯ ಅಗಾಧ ಮಹಾನತೆಯನ್ನು ಕಾಣುತ್ತೇವೆ.**

**– ಶ್ರೀಅರವಿಂದರು**

### ಕಸ್ಮೈ ದೇವಾಯ ಹವಿಷಾ ವಿಧೇಮ

ಇಂದು ಸಹಸ್ರಾರು ಜನ ಹೀಗೆ ಪೂಜಿಸುತ್ತಿರುವ ಈ ಶ್ರೀರಾಮಕೃಷ್ಣರು ಯಾರು? ಯಾರ ಅಮರ ಅಸ್ತಿತ್ವ ಜಗತ್ತಿನಾದ್ಯಂತ ಅಸಂಖ್ಯ ಜನರ ಬದುಕು, ಭವಿಷ್ಯಗಳಿಗೆ ನಿಕಟವಾಗಿ ಸಂಬಂಧಿಸಿದೆಯೋ, ಆ ಶ್ರೀರಾಮಕೃಷ್ಣರು ಯಾರು? ಈ ಪ್ರಶ್ನೆಯನ್ನು ಅವರ ಭಕ್ತರಿಗೆ ಮತ್ತು ಅನುಯಾಯಿಗಳಿಗೆ ಕೇಳಿದರೆ, ಅವರಲ್ಲಿ ಬಹಳಷ್ಟು ಜನರಿಗೆ ಮುಜುಗರ ಉಂಟಾಗುವ ಸಂಭವವುಂಟು. ಇನ್ನು ಅದಕ್ಕೆ ಉತ್ತರಿಸಲು ಪ್ರಯತ್ನಿಸುವವರು ಕೂಡ, ಶ್ರೀರಾಮಕೃಷ್ಣರನ್ನು ಕುರಿತ ತಮ್ಮ ಗಾಢ ನಂಬಿಕೆಗಳಿಗೆ ಅಭಿವ್ಯಕ್ತಿ ನೀಡುವಲ್ಲಿ ವಿಫಲರಾಗುತ್ತಿರುವುದನ್ನು ಬೇಗನೆ ಕಂಡುಕೊಳ್ಳುತ್ತಾರೆ. ಗಿರೀಶ್‌ಚಂದ್ರ ಘೋಷ್ ಒಮ್ಮೆ ಶ್ರೀರಾಮಕೃಷ್ಣರ ಜೀವನಚರಿತ್ರೆ ಬರೆಯುವಂತೆ ಸ್ವಾಮಿ ವಿವೇಕಾನಂದರನ್ನು ಕೇಳಿಕೊಂಡಾಗ, ಸ್ವಾಮೀಜಿ ಕೂಡಲೆ ಸಂಕೋಚಪಟ್ಟುಕೊಂಡು ಹೇಳಿದರಂತೆ: "ಕಡಲನ್ನು ಒಣಗಿಸುವಂತೆ ನನಗೆ ಹೇಳಿ, ಅದನ್ನು ಬೇಕಾದರೆ ಮಾಡುತ್ತೇನೆ; ಪರ್ವತಗಳನ್ನು ಪುಡಿಪುಡಿ ಮಾಡುವಂತೆ ಹೇಳಿ, ಮಾಡುತ್ತೇನೆ; ಆದರೆ ಶ್ರೀರಾಮಕೃಷ್ಣರ ಜೀವನಚರಿತ್ರೆಯನ್ನು ಬರೆಯುವಂತೆ ಮಾತ್ರ ದಯವಿಟ್ಟು ಹೇಳಬೇಡಿ."

ಸ್ವಾಮಿ ವಿವೇಕಾನಂದರಂತಹ ಮಹಾವ್ಯಕ್ತಿ ಕೂಡ ತಮ್ಮ ಗುರುವನ್ನು ಅರ್ಥಮಾಡಿಕೊಳ್ಳುವಲ್ಲಿ ಅಷ್ಟು ಧೈರ್ಯವನ್ನು ತೋರದಿರುವಾಗ, ಅವರ ನಿಜಸ್ವರೂಪವನ್ನು ಗ್ರಹಿಸುವಲ್ಲಿ ಸಾಮಾನ್ಯ ಭಕ್ತರು ಸೋಲುವುದು ಅಚ್ಚರಿಯಾಗೇನೂ ತೋರುವುದಿಲ್ಲ. ನಿಜವಾಗಿ ಹೇಳಬೇಕೆಂದರೆ, ಶ್ರೀರಾಮಕೃಷ್ಣರನ್ನು ಅವರ ಭಕ್ತರು ಬಹಳಷ್ಟು ಸಾರಿ ಒಪ್ಪಿಕೊಂಡಿರುವುದು ಒಂದು ವಿಸ್ತಾರವಾದ ತರ್ಕದ ಅಥವಾ ಆಳವಾದ ಮನನದ ಫಲವಾಗಿಯಲ್ಲ. ಅನೇಕರ ಪಾಲಿಗೆ ಅದು ಬಹುಮಟ್ಟಿಗೆ ಭಕ್ತರ ಹೃದಯಗಳ ಮೇಲೆ ಬಂದೆರಗಿದ ದೈವೀ ಆಕ್ರಮಣದಂತಿರುತ್ತದೆ. ಅವರಿಗೆ ಅದು ಪುಸ್ತಕವೊಂದರ ಓದಿನಿಂದ ಅಥವಾ ಪ್ರವಚನವೊಂದರ ಆಕಸ್ಮಿಕ ಕೇಳುವಿಕೆಯಿಂದ ಅಥವಾ ಆಶ್ರಮವೊಂದರ ಆಕಸ್ಮಿಕ ಭೇಟಿಯಿಂದ ಆಯಿತು ಎನ್ನುವ ಮಾತು ಬೇರೆ. ಹೀಗಾದಾಗ, ತಮಗೆ ಸಂಪೂರ್ಣವಾಗಿ ಅರ್ಥವಾಗದ ಅದ್ಭುತ ಸಂಗತಿಯೊಂದನ್ನು ಒಪ್ಪಿಕೊಳ್ಳುವ ಮತ್ತು ಪೂಜಿಸುವ ಬಲವಾದ ಪ್ರೇರಣೆಗೆ ಅವರು ಒಳಗಾಗಿರುತ್ತಾರೆ ಎನ್ನುವುದೂ ಅಷ್ಟೇ ಸತ್ಯ.

ಆದರೂ, ಆಧ್ಯಾತ್ಮಿಕ ಆದರ್ಶವೊಂದರ ಅಪ್ರಜ್ಞಾಪೂರ್ವಕ ಅಂಗೀಕಾರವು ಕೆಲವೊಮ್ಮೆ ಸಾಧಕನನ್ನು ಅಧ್ಯಾತ್ಮಪಥದಲ್ಲಿ ಬಹುಮುಂದೆ ಕರೆದೊಯ್ಯುವಲ್ಲಿ ಸಮರ್ಥವಾಗುವುದಿಲ್ಲ. ದೈವಶ್ರದ್ಧೆ ಎಂಬುದು ಮನಸ್ಸಿನ ಗೂಢವಾದ ಕತ್ತಲ ಕೋಣೆಯಲ್ಲಿ ಮಾತ್ರ ಅರಸಬಹುದಾದಂತಹ ವಸ್ತುವಲ್ಲ. ಶ್ರದ್ಧೆ ಎಂಬುದು ಅನುಭವದಲ್ಲಿ ಹೊಳೆಯಬೇಕು ಮತ್ತು ಭಕ್ತಿಯು ಸಂಪೂರ್ಣವಾಗಿ ಪ್ರಜ್ಞಾಪೂರ್ವಕವಾದ ಮತ್ತು ಸ್ವಯಂಪ್ರೇರಣೆಯಿಂದ ಆರಿಸಿಕೊಂಡ ಮಾರ್ಗವಾಗಿ ಪರಿಣಮಿಸಬೇಕು.

ಹಿಂದೆ ವೇದಕಾಲದ ಆರ್ಯರು ಹಲವಾರು ದೇವತೆಗಳನ್ನು ಪೂಜಿಸುತ್ತಿದ್ದರು. ಅವರಲ್ಲಿಯೇ ಕೆಲವು ವಿಚಾರಪರರಾದವರು ತಮ್ಮನ್ನೇ ಪ್ರಶ್ನಿಸಿಕೊಳ್ಳತೊಡಗಿದರು : "ಯಾವ ದೇವರಿಗೆ ನಮ್ಮ ಹವಿಸ್ಸನ್ನು ಸಲ್ಲಿಸೋಣ?" ಈ ಬಗೆಯ ಪ್ರಶ್ನೆಗಳು, ಇಂದ್ರಿಯಗೋಚರ ಜಗತ್ತಿನ ಹಿಂದಿರುವ ಸತ್ಯದ ಸ್ವರೂಪವನ್ನು ಕುರಿತು ವಿಚಾರ ಮಾಡಲು ಅವರಿಗೆ ಪ್ರೇರಣೆ ನೀಡಿದುವು; ಈ ಅನ್ವೇಷಣೆ ಬೆಳೆಯುತ್ತ ಬಂದು ಹೇಗೆ ಆತ್ಯಂತಿಕ ಸತ್ಯವಾದ ಬ್ರಹ್ಮದ ಆವಿಷ್ಕಾರದಲ್ಲಿ ಪರ್ಯವಸಾನವಾಯಿತು ಎಂಬುದನ್ನು ಮುಂದೆ ಉಪನಿಷತ್ತುಗಳಲ್ಲಿ ಕಾಣುತ್ತೇವೆ. ಶ್ರೀರಾಮಕೃಷ್ಣರ ಅಥವಾ ಯಾವುದೇ ಸಗುಣ ಬ್ರಹ್ಮದ ಅಥವಾ ಅವತಾರದ ಭಕ್ತರು, ತಾವೂ ಅಂತಹುದೇ ಅನ್ವೇಷಣೆಯನ್ನು ಕೈಕೊಂಡಾಗ, ತಮ್ಮ ಪೂಜಾವಸ್ತುವನ್ನು ಕುರಿತ ಅರ್ಥಗ್ರಹಿಕೆಯ ಪರಿಧಿಗಳು ನಿಜಕ್ಕೂ ವಿಸ್ತಾರಗೊಳ್ಳುವುದನ್ನು ಕಂಡುಕೊಳ್ಳುತ್ತಾರೆ.

### ನನ್ನ ಬಗೆಗೆ ನಿಮಗೆ ಏನನಿಸುತ್ತದೆ?

ಸ್ವತಃ ಶ್ರೀರಾಮಕೃಷ್ಣರೇ ತಮ್ಮ ಜೀವಿತಾವಧಿಯಲ್ಲಿ ಇಂಥ ವೈಚಾರಿಕ ಮನೋಧರ್ಮವನ್ನು ತಮ್ಮ ಆಪ್ತ ಶಿಷ್ಯರಲ್ಲಿ ಪ್ರೋತ್ಸಾಹಿಸಿದರೆಂದು ತೋರುತ್ತದೆ. ತಮ್ಮ ಬಗೆಗೆ ಭಕ್ತರ ಅನಿಸಿಕೆ ಏನೆಂದು ಆಗಿಂದಾಗ್ಯೆ ಅವರು ಕೇಳುವ ರೂಢಿಯಿತ್ತು. ಉದಾಹರಣೆಗೆ 'ಶ್ರೀರಾಮಕೃಷ್ಣ ವಚನವೇದ'ದ ಕರ್ತೃವಾದ 'ಮ' ಅವರನ್ನು, ಅವರ ಮೂರನೆಯ ಭೇಟಿಯ ಸಮಯದಲ್ಲಿ ಶ್ರೀರಾಮಕೃಷ್ಣರು ಹೀಗೆ ಕೇಳಿದರು: "ನಿನ್ನನ್ನು ಏನೋ ಕೇಳಬೇಕಾಗಿದೆ – ನನ್ನ ಬಗೆಗೆ ನಿನ್ನ ಅಭಿಪ್ರಾಯವೇನು? ದೇವರನ್ನು ಕುರಿತು ನನಗೆ ಎಷ್ಟು ಜ್ಞಾನ ಇದೆ?"

ಈ ಪ್ರಶ್ನೆ ಹಾಕುವುದರಲ್ಲಿ ಶ್ರೀರಾಮಕೃಷ್ಣರಿಗೆ ಎರಡು ಉದ್ದೇಶಗಳಿದ್ದುವು. ಮೊದಲನೆಯದಾಗಿ, ಅವರು ಪಡೆದ ಉತ್ತರ ಶಿಷ್ಯನೊಬ್ಬನ ಆಂತರಂಗಿಕ ಒಳನೋಟವನ್ನೂ, ಆತನ ಶ್ರದ್ಧೆಯ ಸ್ವರೂಪದ ಅರ್ಥಗ್ರಹಿಕೆಯನ್ನೂ ಅವರಿಗೆ ನೀಡುತ್ತಿತ್ತು. ಎರಡನೆಯದಾಗಿ, ತಾನು ಪೂಜಿಸುವ ವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಕ್ಕೆ ಶಿಷ್ಯನ ಮನಸ್ಸನ್ನು ಪ್ರಚೋದಿಸುವಂತಿತ್ತು ಮತ್ತು ಗುರುವಿನೊಡನೆ ತನ್ನ ಸಂಬಂಧವನ್ನು

ನೂತನವೂ, ಪ್ರಜ್ಞಾಪೂರ್ವಕವೂ, ಶಾಶ್ವತವೂ ಆದ ಅನುಭವವಾಗಿ ಇರಿಸಿಕೊಳ್ಳುವ ಉದ್ದೇಶವೇ ಆ ಪ್ರಶ್ನೆಯಲ್ಲಿತ್ತು. ನಿಜವಾದ ಪ್ರೀತಿ ಯಾವಾಗಲೂ ಜಡವಾಗಿರುವುದಿಲ್ಲ, ಸಂಕೋಲೆಗಳಿಂದ ಕೂಡಿರುವುದಿಲ್ಲ ಅಥವಾ ಹಳತಾಗುವುದಿಲ್ಲ. ಅದು ಯಾವಾಗಲೂ ಇಡೀ ವ್ಯಕ್ತಿತ್ವವನ್ನು ಆವರಿಸಿದ್ದೂ, ಚಿರನವೀನವೂ ಪ್ರಜ್ಞಾಪೂರ್ವಕವೂ ಆದ ಅನುಭವವಾಗಿರುತ್ತದೆ. ಪ್ರೀತಿಸುವ ವ್ಯಕ್ತಿ ತನ್ನ ಪ್ರಿಯಕರನನ್ನು ಮೊದಲನೆಯ ಬಾರಿ ಭೇಟಿಯಾಗುತ್ತಿರುವನೋ ಎಂಬಂತೆ ನವೀನ ದೃಷ್ಟಿಯಿಂದ ಮತ್ತೆ ಮತ್ತೆ ಸಂಧಿಸುವಾಗ ಮಾತ್ರ ಪ್ರೀತಿ ಎಂಬುದು ಅರ್ಥಪೂರ್ಣವಾಗಿರುತ್ತದೆ (ಅದೇ ರೀತಿ ಭಕ್ತನಾದವನು ನೂತನ ಮತ್ತು ಉನ್ನತವಾದ ದೃಷ್ಟಿಯಿಂದ ಭಗವಂತನನ್ನು ಸಮೀಪಿಸುತ್ತಿದ್ದಾಗ ಮಾತ್ರ ಆತನ ಭಕ್ತಿಯಲ್ಲಿ ನಾವೀನ್ಯತೆ ಮತ್ತು ಉಲ್ಲಾಸ ಇರುತ್ತದೆ).

ಬಹಳಷ್ಟು ಜನ ಸತ್ಯದೊಡನೆ ಸಂಪರ್ಕ ಕಳೆದುಕೊಳ್ಳುತ್ತಾರೆ; ಏಕೆಂದರೆ, ಅವರು ಬದುಕಿನ ಪ್ರವಾಹ ಸೆಳೆದತ್ತ ತೇಲಿಹೋಗುತ್ತಾರೆ. ಇದಕ್ಕೆ ವಿರುದ್ಧವಾಗಿ, ನಿಜವಾದ ಆಧ್ಯಾತ್ಮಿಕ ವ್ಯಕ್ತಿ ಬದುಕನ್ನು ಎದುರಿಸುತ್ತಾನೆ ಮತ್ತು ಬದುಕಿನ ಪ್ರತಿಕ್ಷಣವೂ ಸತ್ಯಕ್ಕೆ ಮುಖಾಮುಖಿಯಾಗುತ್ತಾನೆ. ತಮ್ಮ ಆಯ್ಕೆಯ ಆದರ್ಶಗಳೊಡನೆ ತಮ್ಮ ಸಂಬಂಧವು 'ಹೇಗೋ ಇದ್ದರಾಯಿತು' ಎಂದು ಒಪ್ಪಿಕೊಂಡುಬಿಡುವ ಅಪಾಯಕ್ಕೆ ಭಕ್ತರು ಆಗಾಗ ಗುರಿಯಾಗುತ್ತಾರೆ. ಅವುಗಳ ಬಗೆಗೆ ತಮಗೆ ಈಗಾಗಲೇ ಸಾಕಷ್ಟು ಒಲವು ಇದೆಯೆಂಬ ಆಲೋಚನೆಯಷ್ಟಕ್ಕೇ ಅವರು ತೃಪ್ತರಾಗುತ್ತಾರೆ. ಹಾಗೆಯೆ, ತಮ್ಮ ಧ್ಯೇಯವಸ್ತುವಿನ ಬಗ್ಗೆ ತಮಗೆ ಎಲ್ಲವೂ ತಿಳಿದಿದೆಯೆಂಬ ಭಾವನೆ ಇಟ್ಟುಕೊಂಡು ಆಗಾಗ ಧ್ಯಾನ ಮಾಡಲು ಪ್ರಯತ್ನಿಸುತ್ತಾರೆ. ತಮ್ಮ ಧ್ಯೇಯವಸ್ತುವಿನ ಬಗ್ಗೆ ಅವರಿಗೆ ಎಲ್ಲವೂ ಗೊತ್ತಿದ್ದರೆ, ಅವುಗಳನ್ನು ಕುರಿತು ಅವರು ಮತ್ತೆ ಏಕೆ ತಾನೇ ಧ್ಯಾನಿಸಬೇಕು? ಅಜ್ಞಾನಜನ್ಯವಾದ ಇಂಥ ಪೂರ್ವಾಗ್ರಹವು ಸತ್ಯಾನ್ವೇಷಣೆಯನ್ನು ಆರಂಭದಲ್ಲಿಯೇ ಹಾಳುಮಾಡುತ್ತದೆ ಮತ್ತು ಪ್ರಗತಿಯ ದಾರಿಗೆ ಅಡ್ಡಿಯುಂಟು ಮಾಡುತ್ತದೆ. ಆದ್ದರಿಂದಲೇ ಉಪನಿಷತ್ತು ಬೋಧಿಸುತ್ತದೆ: "ಯಾರಿಗೆ ತಿಳಿದಿಲ್ಲವೋ ಅವನಿಗೆ ಸತ್ಯ ತಿಳಿದಿದೆ; ಯಾರಿಗೆ ತಿಳಿದಿದೆಯೋ ಅವನಿಗೆ ತಿಳಿದಿಲ್ಲ. ಚೆನ್ನಾಗಿ ಬಲ್ಲವರಿಗೆ ಅದು ತಿಳಿದಿಲ್ಲ; ತಿಳಿಯದವರಿಗೆ ತಿಳಿದಿದೆ."

ಶ್ರೀರಾಮಕೃಷ್ಣರು ಹೇಳುತ್ತಿದ್ದರು: "ಇಲ್ಲಿಗೆ ಬರುವ ಭಕ್ತರನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದು. ಒಂದು ಗುಂಪು ಹೇಳುತ್ತದೆ: 'ಓ ದೇವರೇ, ನನಗೆ ಮುಕ್ತಿ ಕೊಡು.' ಅಂತರಂಗದ ವಲಯಕ್ಕೆ ಸೇರಿದ ಇನ್ನೊಂದು ಗುಂಪು ಹಾಗೆ ಮಾತನಾಡುವುದಿಲ್ಲ. ಅವರಿಗೆ ಎರಡು ಸಂಗತಿಗಳನ್ನು ತಿಳಿಯಬೇಕಾಗಿದೆ: (ತಮ್ಮನ್ನು ಉದ್ದೇಶಿಸಿ) ಮೊದಲನೆಯದು, **ನಾನು ಯಾರು ಎಂಬುದು**; ಎರಡನೆಯದು, **ತಾವು ಯಾರು ಮತ್ತು ನನ್ನೊಡನೆ ತಮ್ಮ ಸಂಬಂಧವೇನು** ಎಂಬುದು." ಇದು, "ನಿಜವಾದ ಧರ್ಮ ಎಂಬುದು ಶಾಶ್ವತ ಆತ್ಮ ಮತ್ತು ಶಾಶ್ವತ ಭಗವಂತನ ನಡುವಣ ಶಾಶ್ವತ ಸಂಬಂಧ" ಎಂಬ ಸ್ವಾಮಿ ವಿವೇಕಾನಂದರ ಹೇಳಿಕೆಗೆ ಸಂವಾದಿಯಾಗಿದೆ. ಭಕ್ತ ಮತ್ತು ಆತನ ಆಯ್ಕೆಯ ಆದರ್ಶಗಳ ನಡುವಿನ ಸಂಬಂಧವು ಶಾಶ್ವತವಾಗಿ ನಿಲ್ಲುವುದು ಪೂಜಕನು ತನ್ನ ನೈಜಸ್ವರೂಪ ಮತ್ತು ಪೂಜ್ಯವಸ್ತುವಿನ ಸತ್ಯವಾದ ಜ್ಞಾನವನ್ನು ಆ ಸಂಬಂಧಕ್ಕೆ ಅವಲಂಬನೆಯಾಗಿ ಇಟ್ಟುಕೊಂಡಿರುವಾಗ ಮಾತ್ರ.

## ನಿಗೂಢತೆಯ ಪ್ರಭಾವಳಿ

ಶ್ರೀರಾಮಕೃಷ್ಣರ ಭಕ್ತರಾದ ನಾವು "ಶ್ರೀರಾಮಕೃಷ್ಣರು ಯಾರು?" ಎಂಬ ಪ್ರಶ್ನೆಯನ್ನು ಕೇಳುವುದು ಮೇಲಿನ ಹೇಳಿಕೆಯಂತಹ ಸಂದರ್ಭದಲ್ಲಿ. ಇಂಥದೊಂದು ಪರಿಶೀಲನೆಯನ್ನು ನಾವು ಮಾಡಲು ಯತ್ನಿಸಿದಾಗ, ಶ್ರೀರಾಮಕೃಷ್ಣರ ಸಂಕ್ಷಿಪ್ತ ಜೀವಿತಾವಧಿಯ ಬಾಹ್ಯ ಚಟುವಟಿಕೆಗಳನ್ನು ಕುರಿತ ಅಲ್ಪ ಸ್ವಲ್ಪ ವಾಸ್ತವಿಕ ಮಾಹಿತಿಯ ಹೊರತಾಗಿ, ಅವರು ನಮಗೆ ಸಂಪೂರ್ಣ ಅಪರಿಚಿತರಾಗಿಯೇ ಉಳಿಯುತ್ತಾರೆ ಎಂಬ ಅಚ್ಚರಿಯ ಅಂಶವನ್ನು ನಾವು ಕಂಡುಕೊಳ್ಳುತ್ತೇವೆ. ಜಗತ್ತಿನಲ್ಲಿ ಶ್ರೀರಾಮಕೃಷ್ಣರಾಗಿ ಬದುಕಿದ ಆ ಮಹಾನ್ ಚೇತನದ ಬಗೆಗೆ ನಿಜವಾಗಿಯೂ ನಮಗೆ ಏನೇನೂ ತಿಳಿಯದು. ಅವರ ಜೀವನದ ಪರಿಚಿತ ಅಂಶಗಳನ್ನು ವಿಶ್ಲೇಷಿಸಿದಾಗಲೂ, ನಾವು ಹೆಚ್ಚು ಕಡಮೆ ಹೆಜ್ಜೆಹಜ್ಜೆಗೂ ನಿಗೂಢತೆಯೊಂದಕ್ಕೆ ತೆರೆದುಕೊಳ್ಳುತ್ತ ಹೋಗುತ್ತೇವೆ.

ಹುಟ್ಟಿನಿಂದಲೆ ಶ್ರೀರಾಮಕೃಷ್ಣರ ಬದುಕನ್ನು ಒಂದು ನಿಗೂಢತೆಯ ಪ್ರಭಾವಳಿ ಆವರಿಸಿಕೊಂಡಿದೆ. ಅವರ ಜೀವನ ಚರಿತ್ರೆಕಾರರ ಪ್ರಕಾರ, ಶ್ರೀರಾಮಕೃಷ್ಣರು ಹುಟ್ಟುವುದಕ್ಕೆ ಮುನ್ನ, ಅವರ ತಂದೆ ಗಯಾದಲ್ಲಿ ಇದ್ದಾಗ ಅವರಿಗೆ ಒಂದು ಕನಸು ಬಿದ್ದಿತ್ತು; ಅದರಲ್ಲಿ ಭಗವಾನ್ ವಿಷ್ಣು ಅವರಿಗೆ ಕಾಣಿಸಿಕೊಂಡು, ತಾನು ಅವರ ಮಗನಾಗಿ ಜನಿಸುವುದಾಗಿ ಹೇಳಿದ್ದ. ಈ ನಡುವೆ ಶ್ರೀರಾಮಕೃಷ್ಣರ ತಾಯಿಗೆ ಅವರ ಸ್ವಂತ ಹಳ್ಳಿಯಾದ ಕಾಮಾರಪುಕುರದಲ್ಲಿ ಒಂದು ಅದ್ಭುತವಾದ ಆಧ್ಯಾತ್ಮಿಕ ಅನುಭವವಾಗಿತ್ತು. ಒಂದು ದಿವಸ ಆಕೆ ಮನೆಯ ಮುಂದಿನ ಈಶ್ವರ ದೇವಸ್ಥಾನದ ಮುಂದೆ ನಿಂತಿದ್ದಾಗ, ದೇವರ ವಿಗ್ರಹದಿಂದ ದಿವ್ಯಪ್ರಭಾಪ್ರವಾಹವೊಂದು ತನ್ನೊಳಕ್ಕೆ ಪ್ರವೇಶಿಸಿದ್ದನ್ನು ಕಂಡಳು; ತಾನೊಂದು ಮಗುವಿನೊಡನೆ ಇರುವುದಾಗಿ ಅವಳಿಗೆ ಆ ಕ್ಷಣಕ್ಕೇ ಅನಿಸತೊಡಗಿತು. ಈಗ, ಇಲ್ಲಿ ಒಂದು ಸ್ವಾರಸ್ಯಕರ ಪ್ರಶ್ನೆ ಉದ್ಭವಿಸುತ್ತದೆ. ಶ್ರೀರಾಮಕೃಷ್ಣರು ನಿಜವಾಗಿ ಯಾರ ಅವತಾರ—ವಿಷ್ಣುವಿನ ಅವತಾರವೊ ಅಥವಾ ಶಿವನದೊ? ಅಥವಾ, ತಾಯಿಯ ಗರ್ಭಕ್ಕೆ ಬರುವಾಗಲೆ ಅದು ಧಾರ್ಮಿಕ ಸಮನ್ವಯದ ಒಂದು ಪ್ರಕರಣವಾಗಿತ್ತೋ? ಈ ವಿಚಿತ್ರ ವಿದ್ಯಮಾನದ ಬಗೆಗೆ ಶ್ರೀರಾಮಕೃಷ್ಣರ ಅಧಿಕೃತ ಜೀವನ ಚರಿತ್ರೆಗಳು ಏನನ್ನೂ ಹೇಳುವುದಿಲ್ಲ.

ಕರುಣಾಪೂರಿತ ಸಮಗ್ರ ಚಿಂತನೆಯಲ್ಲಿ ಅದಮ್ಯ ಶಕ್ತಿ ಅಡಗಿದೆ. ಮಾನವತೆಯು ಅದರ ಸೂಕ್ಷ್ಮ ಅಭಿವ್ಯಕ್ತಿಗಳನ್ನು ಗೌರವಿಸಬೇಕು. ಆ ಅಭಿವ್ಯಕ್ತಿಗಳು ಮೇಲಿನ ಸಮಗ್ರ ಹಾಗೂ ರಚನಾತ್ಮಕ ಚಿಂತನೆಗೆ ಕಾರಣೀಭೂತವಾಗಬಲ್ಲುವು. ಒಳಿತಿನ ಚಿಂತನೆಯು ಸೃಜನಾತ್ಮಕವಾದುದು! ಒಳಿತೆಂಬುದು ಎಂದಿಗೂ ನಾಶವಾಗದು. ಇದು ನಿಶ್ರಾಂತವಾಗಿ ಎಲ್ಲವನ್ನೂ ಉದಾತ್ತಗೊಳಿಸುತ್ತಿರುವುದು ಮತ್ತು ರಚಿಸುತ್ತಿರುವುದು. ಒಳಿತಿನ ಆದೇಶಗಳಿಂದ ಚಿರಂತನ ಭೂಮಿಕೆಗಳು ಪರಿಪುಷ್ಟವಾಗುತ್ತವೆ; ಮಾನವತೆಗೆ ಎಲ್ಲ ಬಗೆಯ ಶ್ರೇಷ್ಠ ರೂಪಗಳಿಂದ ನೀಡಲ್ಪಡುತ್ತದೆ. ಸೃಜನಾತ್ಮಕ ಒಳಿತಿಗಾಗಿನ ಭಗವಾನ್ ಶ್ರೀರಾಮಕೃಷ್ಣರ ತೂರ್ಯವಾಣಿಯು ಮಾನವತೆಯ ಅತ್ಯಂತ ಶ್ರೇಷ್ಠ ಆಧ್ಯಾತ್ಮಿಕ ಪರಂಪರೆಯಾಗಿ ಎಂದಿಗೂ ಉಳಿಯುತ್ತದೆ.

–ನಿಕೋಲಸ್ ಡಿ ರೋರಿಕ್
(ರಷ್ಯಾ ದೇಶದ ಪ್ರಖ್ಯಾತ ಚಿತ್ರಕಾರ)

ಶ್ರೀರಾಮಕೃಷ್ಣರ ಬಾಲ್ಯ ಕೂಡ ನಿಗೂಢ ಅನುಭವ ಹಾಗೂ ಘಟನೆಗಳಿಂದ ತುಂಬಿತ್ತು. ವಾಸ್ತವವಾಗಿ ಅವರ ಇಡೀ ತಾರುಣ್ಯ ಆಧ್ಯಾತ್ಮಿಕ ಸಾಧನೆಗಳಲ್ಲಿ ಕಳೆಯಿತು; ಅವುಗಳ ತೀವ್ರತೆ, ವೈವಿಧ್ಯ, ಸಮೃದ್ಧಿಗಳಿಗೆ ಸಂಬಂಧಿಸಿದ ಮತ್ತೊಂದು ಉದಾಹರಣೆ ಬೇರೆ ಯಾವುದೇ ಸಾಧುಸಂತರುಗಳ ಜೀವನಚರಿತ್ರೆಯಲ್ಲಿ ದೊರೆಯುವುದಿಲ್ಲ. ಅವರಿಗೆ ಉಪದೇಶ ಮಾಡಲು ಬಂದವರು ಅವರನ್ನು ಆರಾಧಿಸುವುದಕ್ಕಾಗಿ ಉಳಿದುಕೊಂಡರು. ಅವರು ಹೊರಸೂಸಿದ ದಿವ್ಯತೆಯ ಪ್ರಭೆ ಅಂದಿನ ಮಹಾ ವಿದ್ವಾಂಸರಿಗೂ ಸುಪ್ತವಾಗಿ ಪ್ರಭಾವ ಬೀರಿ, ಶ್ರೀರಾಮಕೃಷ್ಣರು ಭಗವಂತನ ಅವತಾರವೆಂದು ಅವರು ಮುಕ್ತವಾಗಿ ಘೋಷಿಸುವಂತೆ ಮಾಡಿತು. ಶ್ರೀರಾಮಕೃಷ್ಣರು ತಮ್ಮ ಶಿಷ್ಯರನ್ನೂ, ಭಕ್ತರನ್ನೂ ತಮ್ಮ ಅಪ್ರತಿಹತ ಶಕ್ತಿಯಿಂದ ಆಕರ್ಷಿಸಿದರು ಮತ್ತು ಅವರಲ್ಲಿ ಪ್ರತಿಯೊಬ್ಬರಿಗೂ ಬೇರೆ ಬೇರೆ ರೀತಿಯಲ್ಲಿ ತಮ್ಮನ್ನು ಕಾಣಿಸಿಕೊಂಡರು. ಅವರ ಆಶ್ರಯದಾತನಾದ ಮಥುರಬಾಬು ಅವರಲ್ಲಿ ಶಿವ, ಕಾಳಿಯರನ್ನು ಕಂಡನು. ತಮ್ಮ ಗುರುವಾದ ಭೈರವಿ ಬ್ರಾಹ್ಮಣಿಯ ಮತ್ತು ಕೆಲವರು ಗೃಹಸ್ಥ ಶಿಷ್ಯರ ಪಾಲಿಗೆ ಅವರು ಶ್ರೀಗೌರಾಂಗನಾಗಿದ್ದರು. 'ಗೋಪಾಲನ ತಾಯಿ' ಎಂದು ಹೆಸರಾದ ಮಹಾ ಭಕ್ತೆಯ ಪಾಲಿಗೆ ಅವರು ಶ್ರೀಕೃಷ್ಣನಾಗಿದ್ದರು. ಸ್ವಾಮಿ ವಿವೇಕಾನಂದರು ಅವರಲ್ಲಿ ತಮ್ಮ ಅತ್ಯುನ್ನತ ಆದರ್ಶಗಳ ಮೂರ್ತರೂಪವನ್ನು ಕಂಡರು. ಒಮ್ಮೆ ಶ್ರೀರಾಮಕೃಷ್ಣರಿಗೆ ತಾವು ರಾಧೆಯಾಗಿದ್ದಂತೆ ಅನುಭವವಾಯಿತು; ಇದು ಅವರ ಜೀವನದ ಮೇಲೆ ಅದ್ಭುತವಾದ ಪ್ರಭಾವವನ್ನು ಬೀರಿತು. ಪುರಿಯ ಜಗನ್ನಾಥ ದೇವಾಲಯದಲ್ಲಿ ಸ್ವಾಮಿ ತುರೀಯಾನಂದರಿಗೆ ಜಗನ್ನಾಥಸ್ವಾಮಿಯೇ ಶ್ರೀರಾಮಕೃಷ್ಣರೆಂಬಂತೆ ಕಂಡುಬಂದನು. ಸ್ವಾಮಿ ಶಿವಾನಂದರಿಗೆ ಕಾಶಿಯಲ್ಲಿ ಆದ ಅನುಭವವೊಂದರಲ್ಲಿ ಶ್ರೀರಾಮಕೃಷ್ಣರು ಶಿವನಾಗಿ ಕಂಡುಬಂದರು. ಶ್ರೀರಾಮಕೃಷ್ಣರ ವ್ಯಕ್ತಿತ್ವದಲ್ಲಿ ಎಲ್ಲ ಮಹಾನ್ ಅವತಾರಗಳೂ, ದೇವತೆಗಳೂ ಏಕೀಭಾವಗೊಂಡಿರುವಂಥ ಒಂದು ಅದ್ಭುತ ಆಧ್ಯಾತ್ಮಿಕ ಅನುಭವ ಸ್ವಾಮಿ ಅಭೇದಾನಂದರಿಗೆ ಆಯಿತು.

ವಿವಿಧ ದೈವೀ ಸ್ವರೂಪಗಳನ್ನು ತಳೆಯುವಂಥ ಈ ಬಹುಮುಖ ಸಾಮರ್ಥ್ಯ ಶ್ರೀರಾಮಕೃಷ್ಣ ಚೇತನದ ಒಂದು ವಿಶಿಷ್ಟ ಲಕ್ಷಣವಾಗಿದ್ದು, ಇದು ಅವರನ್ನು ಜಗತ್ತಿನ ಇತರ ಮಹಾನ್ ಅವತಾರಗಳು ಹಾಗೂ ಪ್ರವಾದಿಗಳಿಂದ ಪ್ರತ್ಯೇಕಿಸುತ್ತದೆ. ಆದರೆ, ಇದು ಅವರ ನೈಜ ಸ್ವರೂಪವನ್ನು ಮುಸುಕಿರುವ ನಿಗೂಢತೆಯನ್ನು ಮತ್ತಷ್ಟು ಸಾಂದ್ರಗೊಳಿಸುತ್ತದೆ ಮತ್ತು ಧಾರ್ಮಿಕ ಶ್ರದ್ಧೆಯ ನಮ್ಮ ತಿಳಿವಿನ ಸಿದ್ಧಮಾದರಿಗಳಿಗೆ ಹೊಂದುವಂತೆ ಅವರನ್ನು ವರ್ಗೀಕರಿಸುವ ನಮ್ಮೆಲ್ಲ ಪ್ರಯತ್ನಗಳನ್ನು ವಿಫಲಗೊಳಿಸುತ್ತದೆ. ಹೀಗೆ ಅವರು ಏಕಕಾಲದಲ್ಲಿ ವಿಶಿಷ್ಟವೂ ಸಾರ್ವದೇಶಿಕವೂ ಆಗಿದ್ದರು.

**ತಾತ್ಕಾಲಿಕ ಮತ್ತು ಶಾಶ್ವತ ರೀತಿಗಳು**

ಶ್ರೀರಾಮಕೃಷ್ಣರನ್ನು ಇಂದು ಅವರ ಸಾವಿರಾರು ಜನ ಅನುಯಾಯಿಗಳು ಮಾತ್ರವಲ್ಲದೆ, ಜಗತ್ತಿನ ವಿವಿಧ ಭಾಗಗಳಲ್ಲಿನ ಬಹಳಷ್ಟು ಜನ ಭಗವಂತನ ಅವತಾರವೆಂದು ಒಪ್ಪಿಕೊಂಡಿದ್ದಾರೆ; ಅವರ ಪೈಕಿ ಹಲವಾರು ಜನ ಖ್ಯಾತ ಚಿಂತಕರು ಮತ್ತು ಪ್ರಸಿದ್ಧ ವ್ಯಕ್ತಿಗಳು ಕೂಡ ಇದ್ದಾರೆ. ಶ್ರೀರಾಮಕೃಷ್ಣರ ಆಧುನಿಕ ಜೀವನಚರಿತ್ರಕಾರನೊಬ್ಬ ಅವರ ಬದುಕಿನ ಈ ಮುಖವನ್ನು ಚರ್ಚಿಸುವಲ್ಲಿ ತನ್ನ ಹಿಂದಿನವರಷ್ಟು ಸಂಕೋಚ ಮತ್ತು ಅಪರಾಧಿ ಭಾವನೆಯನ್ನು ಹೊಂದಿರಲಾರ. ಶ್ರೀರಾಮಕೃಷ್ಣರ ಬದುಕು ಮತ್ತು ಅನುಭವಗಳು ಅಸಾಧಾರಣವಾಗಿದ್ದು, ಅವು ಸಾಮಾನ್ಯ ಸಂತ ಪದವಿಯ ಮೇರೆಗಳನ್ನು ಮೀರುತ್ತವೆಂಬ ಅಂಶ ಅವರ ಬಗ್ಗೆ ಗಮನವಿಟ್ಟು ಅಧ್ಯಯನ ಮಾಡುವವರಿಗೆಲ್ಲ ಸ್ಪಷ್ಟವಾಗಿ ಗೊತ್ತಾಗುತ್ತದೆ. ನಮಗೆ ನಿಜವಾದ ಕಷ್ಟವಿರುವುದು ಅವರನ್ನು ಅವತಾರವೆಂದು ಕರೆಯುವುದರಲ್ಲಲ್ಲ, ಆ ಶಬ್ದದ ನಿಜವಾದ ಅರ್ಥವೇನು ಎಂದು ತಿಳಿಯುವುದರಲ್ಲಿ. ಅಪರಿಚಿತರಾದ ಶ್ರೀರಾಮಕೃಷ್ಣರು ನಮಗೆ ಇಲ್ಲಿ ಎದುರಾಗುತ್ತಾರೆ; ಏಕೆಂದರೆ, ಅವರ ಅವತಾರದ ನಿಗೂಢತೆಗೆ ಇದುವರೆಗೂ ಸುಲಭವಾದ ವಿವರಣೆ ಸಿಕ್ಕಿಲ್ಲ. ಶ್ರೀರಾಮಕೃಷ್ಣರ ಜೀವನ, ಸಂದೇಶಗಳ ಸರಿಯಾದ ಅರ್ಥಗ್ರಹಿಕೆ ಮತ್ತು ಮೌಲ್ಯಮಾಪನವು ಈ ಅವತಾರದ ನಿಗೂಢತೆಯನ್ನು ಅಂಗೀಕರಿಸಿಯೇ ಮುನ್ನಡೆಯಬೇಕಾಗಿದೆ. ಶ್ರೀರಾಮಕೃಷ್ಣರ ಸ್ವಾಭಾವಿಕ ಸ್ವರೂಪವನ್ನು ಆವರಿಸಿರುವ ನಿಗೂಢತೆಯು ಅಂತಿಮವಾಗಿ ಅವರ ಅವತಾರದ ನಿಗೂಢತೆಯೊಡನೆ ಬೆಸೆದುಕೊಂಡಿದೆ.

ಅವತಾರವೊಂದರ ಪ್ರಮುಖ ಉದ್ದೇಶವೆಂದರೆ, **ಮನುಕುಲದ ಉದ್ಧಾರ**. ಆದರೂ, ವ್ಯಕ್ತಿಯನ್ನು ಆತನ ಮೂಲ ಪಾಪ

ದಿಂದ ಪಾರುಮಾಡುವುದು ಎಂಬ ಕ್ರೈಸ್ತಮತದ ಸಂಕುಚಿತಾರ್ಥದಲ್ಲಿ 'ಉದ್ಧಾರ' ಶಬ್ದವನ್ನು ಇಲ್ಲಿ ಬಳಸಿಲ್ಲ. ಲಕ್ಷಾಂತರ ಆತ್ಮಗಳಿಗೆ ಆಧ್ಯಾತ್ಮಿಕ ಶಕ್ತಿ, ಜ್ಞಾನಗಳನ್ನು ತುಂಬಿ ಅವುಗಳ ಬಂಧನವನ್ನು ಹರಿದೊಗೆದು, ಅಜ್ಞಾನವನ್ನು ನಾಶಗೊಳಿಸುವ ಮತ್ತು ಪರಮ ಶಾಂತಿ, ಆನಂದಗಳನ್ನು ಅನುಭವಿಸಬಲ್ಲಂಥ, ಅಸ್ತಿತ್ವದ ಉನ್ನತ ಭೂಮಿಕೆಗಳಿಗೆ ಅವುಗಳನ್ನು ಎತ್ತಬಲ್ಲ ದೈವೀಪುರುಷನೊಬ್ಬನ ಅತಿಮಾನುಷ ಶಕ್ತಿಯನ್ನು ನಿರ್ದೇಶಿಸುವುದಕ್ಕಾಗಿ ಮಾತ್ರ ಅದನ್ನಿಲ್ಲಿ ಬಳಸಲಾಗಿದೆ. ಬಹುಪಾಲು ಸಾಮಾನ್ಯ ಮಾನವರು ತಮ್ಮ ಸ್ವಂತ ವೈಯಕ್ತಿಕ ಪ್ರಯತ್ನಗಳಿಂದ ಇದನ್ನೆಲ್ಲ ಸಾಧಿಸಲಾರರು. ಅವತಾರಪುರುಷನೆಂಬುವವನು ಆಧ್ಯಾತ್ಮಿಕ ಶಕ್ತಿಯ ಒಂದು ಬೃಹತ್ ಆಗರ; ಅವನು ತನ್ನನ್ನೇ ಕೇಂದ್ರವಾಗಿ ಮಾಡಿಕೊಂಡು ಆಧ್ಯಾತ್ಮಿಕ ಶಕ್ತಿಗಳ ಕ್ಷೇತ್ರವೊಂದನ್ನು ಸೃಷ್ಟಿಸುತ್ತಾನೆ. ಅವತಾರಪುರುಷನ ಅಪ್ರತಿಹತ ಸಂಕಲ್ಪದಿಂದ ಈ ಕ್ಷೇತ್ರದೊಳಕ್ಕೆ ಆಕರ್ಷಿತರಾಗುವ ಯಾರೇ ಆದರೂ, ಶಾಂತಿ, ಸ್ವಾತಂತ್ರ್ಯಗಳನ್ನು ಸಹಜವಾಗಿಯೆ ಪಡೆಯುತ್ತಾರೆ. ಅವತಾರ, ಅನುಗ್ರಹಗಳ ಸಿದ್ಧಾಂತಗಳನ್ನು ಸ್ವಾಮಿ ವಿವೇಕಾನಂದರು ಸಾರತಃ ವಿವರಿಸುವುದು ಹೀಗೆ.

ಅವತಾರಪುರುಷನೊಬ್ಬನ ಅನುಗ್ರಾಹಕ ಶಕ್ತಿ ಅವನು ತನ್ನ ಭೌತಿಕ ಕಾಯದಿಂದ ಜಾರಿದ ಬಳಿಕ, ಬೃಹತ್ ಪ್ರಮಾಣದಲ್ಲಿ ಪ್ರಾರಂಭವಾಗುತ್ತದೆ. ಈ ಅವತಾರದ ಉದ್ದೇಶವೆಂದರೆ, ಪೂಜ್ಯಾರ್ಹ ಮಾನವರೂಪದ ಆರಾಧ್ಯ ಮಾದರಿಯೊಂದನ್ನು ಮನುಕುಲಕ್ಕೆ ಪ್ರಕಟಪಡಿಸುವುದು, ಬದುಕಿನ ಹೊಸ ಆದರ್ಶವೊಂದನ್ನು ಸ್ಥಾಪಿಸುವುದು, ಭರವಸೆಯ ಹೊಸ ಸಂದೇಶವೊಂದನ್ನು ನೀಡುವುದು. ಇವೆಲ್ಲ ಜನತೆಯ ಸಮಕಾಲೀನ ಅಗತ್ಯಗಳಿಗೆ ಮತ್ತು ಮನಃಸ್ಥಿತಿಗೆ ಹೊಂದಿಕೊಂಡಿರುತ್ತವೆ. ಆದರೆ ಈ ಎಲ್ಲ ಕ್ರಿಯೆಗಳೂ, ತಮ್ಮಷ್ಟಕ್ಕೆ ತಾವೇ ಎಷ್ಟೇ ಅಗತ್ಯವಾಗಿದ್ದರೂ, ಸೀಮಿತ ಮೌಲ್ಯವನ್ನು ಹೊಂದಿವೆ. ಅವು ದುಃಖಾರ್ತರಾದ ಜನತೆಯನ್ನು ವ್ಯರ್ಥವಾದ ಲೌಕಿಕ ಹಂಬಲಗಳಿಂದ ವಿಮುಖರನ್ನಾಗಿಸಿ, ನಿರ್ದಿಷ್ಟ ಧಾರ್ಮಿಕ ಕೇಂದ್ರವೊಂದರತ್ತ ಸೆಳೆಯುವಲ್ಲಿ ಮಾತ್ರ ಸಫಲವಾಗುತ್ತವೆ. ಅವತಾರಪುರುಷನೊಬ್ಬನ ನಿಜವಾದ ಕಾರ್ಯ ಪ್ರಾರಂಭಗೊಳ್ಳುವುದು, ತನ್ನ ಪ್ರಭಾವಿ ವಲಯಕ್ಕೆ ಜನರನ್ನು ಎಳೆದು ತಂದಾಗಲೆ. ಅವತಾರವೊಂದರ ಲೌಕಿಕ ಜೀವನ, ಅದನ್ನೂ ಮೀರಿ ನಿಂತಿರುವ ಅದರ ತಿರುಳನ್ನು ನಿರ್ದೇಶಿಸುವ ಫಲಕವಷ್ಟೆ. ಇದು ಶ್ರೀರಾಮಕೃಷ್ಣರ ಅಭಿಪ್ರಾಯ. ಅವರು ಹೀಗೆ ಹೇಳಿದಾಗ ವ್ಯಕ್ತವಾಗುವುದೇನೆಂದರೆ ಅವತಾರ ಎಂಬುದು ಗೋಡೆಯಲ್ಲಿನ ಒಂದು ರಂಧ್ರದಂತೆ; ಅದರ ಮೂಲಕ ಇನ್ನೊಂದು ಬದಿಯನ್ನು—ಬೇರೆ ಬಗೆಯಲ್ಲಿ ನೋಟಕ್ಕೆ ಅಲಭ್ಯವಾದುದನ್ನು—ನೋಡುವುದು ಸಾಧ್ಯ.

ಅವತಾರಪುರುಷನೊಬ್ಬನ ವಾಸ್ತವತೆಯನ್ನು ಅವನ ಲೌಕಿಕ ಜೀವನ ಹಾಗೂ ಚಟುವಟಿಕೆಗಳೊಡನೆ ಸಂಪೂರ್ಣವಾಗಿ ಸಮೀಕರಿಸಿ, ಅವನ ಅತೀತದ ಆಯಾಮವನ್ನು ಹೊರತುಪಡಿಸುವುದೆಂದರೆ, ಬಾಗಿಲನ್ನೇ ಮನೆಯೆಂದು ತಪ್ಪಾಗಿ ಗ್ರಹಿಸಿದಂತೆ. ಯೇಸುವಿನ ಬದುಕಿಗೆ ಸಂಬಂಧಿಸಿದಂತೆ ಪ್ರಾಟೆಸ್ಟೆಂಟ್‌ರು ಮಾಡುತ್ತಿರುವ ತಪ್ಪು ಇದು. ಯೇಸುವಿನ ಚಾರಿತ್ರಿಕತೆಯ ಮೇಲೆ ಅತಿಯಾದ ಒತ್ತು ಹಾಕಿ, ಅವತಾರದ ಮಹತ್ವವನ್ನು ಅವನ ಲೌಕಿಕ ಬದುಕಿನ ನಿರ್ದಿಷ್ಟ ಘಟನೆಗಳಿಗೆ ಪರಿಮಿತಿಗೊಳಿಸುವ ಮೂಲಕ, ಅವನ ಅನುಭಾವಿಕ ಹಾಗೂ ಆಧ್ಯಾತ್ಮಿಕ ಆಯಾಮಗಳನ್ನು ಮರೆಮಾಚಲು ಕೆಲವು ಆಧುನಿಕ ಪ್ರಾಟೆಸ್ಟೆಂಟ್‌ರು ಬಯಸುತ್ತಿದ್ದಾರೆ.

ಅವತಾರಪುರುಷನ ಚಾರಿತ್ರಿಕ ಮುಖವೆಂಬುದು ಅವನ ಶಾಶ್ವತ ಆಧ್ಯಾತ್ಮಿಕ ಸತ್ವದ ಒಂದು ಪಾರ್ಶ್ವಿಕ ಮುಖ ಮಾತ್ರ. ಈ ಭೂಮಿಯ ಮೇಲಿನ ಅವನ ಕಾರ್ಯಚಟುವಟಿಕೆಗಳು ಅವನ ಅತೀತ ಶಕ್ತಿ, ಉದ್ದೇಶಗಳಿಂದ ತನ್ನ ಪ್ರಾಮಾಣ್ಯ, ಹಾಗೂ ಅರ್ಥಪೂರ್ಣತೆಯನ್ನು ಗಳಿಸಿಕೊಳ್ಳುತ್ತವೆ. ಶ್ರೀರಾಮಕೃಷ್ಣರ ಜೀವನ, ಸಾಧನೆಗಳನ್ನು ಅಧ್ಯಯನ ಮಾಡುವಾಗ ನಾವು ಈ ಸಂಗತಿಯನ್ನು ಮರೆಯಬಾರದು. ಅವರ ತೀವ್ರವಾದ 'ಕಾಮಿನೀ ಕಾಂಚನ' ತ್ಯಾಗ, ಅತಿಮಾನುಷ ಆಧ್ಯಾತ್ಮಿಕ ತುಮುಲಗಳು ಮತ್ತು ಅನುಭವಗಳು, ಅವರ ಸಂದೇಶದ ಆಳ ಮತ್ತು ಅಗಲಗಳು—ಇವೆಲ್ಲವೂ ದಿಟವಾಗಿಯೂ ವಿಶಿಷ್ಟವೂ, ಅಸಾಧಾರಣವೂ ಮತ್ತು ಭೂಮವೂ ಆಗಿದ್ದುವು. ಆದರೆ ಅವು ನಮ್ಮ ಸಾಮಾನ್ಯ ಕಣ್ಣುಗಳಿಗೆ ಕಾಣದ ಅವರ ಲೋಕಾತೀತ ವೈಭವವನ್ನು ಸೂಚಿಸುತ್ತವೆಯಷ್ಟೆ. ಸುಪ್ರಸಿದ್ಧವಾದ 'ಪುರುಷಸೂಕ್ತ'ದಲ್ಲಿ ಹೇಳುವ ಮಾತು, ಈ ಪ್ರಕರಣದಲ್ಲಿ, ಪ್ರಾಯಶಃ ಸೀಮಿತ ಅರ್ಥದಲ್ಲಿ, ನಿಜವೆನ್ನಬಹುದು: "ಈ ಎಲ್ಲ (ಸೃಷ್ಟ್ಯಾತ್ಮಕವಾದ) ವಿಶ್ವವು ಪುರುಷನ ವೈಭವದ ಕಾಲುಭಾಗದ ಅಭಿವ್ಯಕ್ತಿಯಷ್ಟೆ ಆಗಿದೆ; ಉಳಿದ ಮುಕ್ಕಾಲು ಭಾಗ ಸ್ವರ್ಗಭೂಮಿಯಲ್ಲಿ ಅಡಗಿದೆ."

### ಅನಂತ ಆಧ್ಯಾತ್ಮಿಕ ಭಾವನೆಗಳ ಮೂರ್ತರೂಪ

ಅವತಾರವೊಂದನ್ನು ಅರ್ಥಮಾಡಿಕೊಳ್ಳಬೇಕಾದರೆ ಮನುಕುಲಕ್ಕೆ ಶತಮಾನಗಳೇ ಬೇಕಾಗುತ್ತವೆ. ಹಲವಾರು ಶತಮಾನಗಳ ಅವಧಿಯಲ್ಲಿ ಲಕ್ಷಾಂತರ ಜನರು ಬುದ್ಧ, ಕ್ರಿಸ್ತರ ಬದುಕು, ಬೋಧನೆಗಳಿಂದ ಸ್ಫೂರ್ತಿಗೊಂಡಿದ್ದಾರೆ; ಅವರ ಬಗೆಗೆ ನೂರಾರು ಪುಸ್ತಕಗಳು ರಚಿತವಾಗಿವೆ. ಆದರೂ ಅವರು ಇನ್ನೂ ಹೊಸ ಅಧ್ಯಯನಗಳಿಗೆ ಪ್ರೇರಣೆಯಾಗುತ್ತಲೇ ಇದ್ದಾರೆ; ಅವರ ಕುರಿತಾದ ಹೊಸ ಹೊಸ ಪುಸ್ತಕಗಳು ಈಗಲೂ ಹೊರಬರುತ್ತಿದ್ದು, ಈ ಪ್ರಾಚೀನಾಚಾರ್ಯರ ಸಮಕಾಲೀನ ಪ್ರಸ್ತುತತೆ ಹಾಗೂ ಅರ್ಥಪೂರ್ಣತೆಯ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತಲೇ ಇವೆ. ಶ್ರೀರಾಮಕೃಷ್ಣರ ನೇರ ಶಿಷ್ಯರೊಬ್ಬರು, ಒಮ್ಮೆ ಸ್ವಾಮಿ ವಿವೇಕಾನಂದರಿಗೆ, ಅವರ ಉಪದೇಶ ವಿಧಾನಗಳು ಮತ್ತು ಸಾಮಾಜಿಕ ಸೇವೆ ಪಾಶ್ಚಾತ್ಯ ಮಾದರಿಯವಾಗಿದ್ದು,

ಶ್ರೀರಾಮಕೃಷ್ಣರ ಬೋಧನೆಗಳಿಗೆ ಹೊಂದಿಕೊಳ್ಳುವುದಿಲ್ಲ ಎಂದು ದೂರಿದರು. ಆಗ ಸ್ವಾಮೀಜಿ ಆವೇಶಭರಿತರಾಗಿ ಹೀಗೆಂದರು: "ವಿಷಯವಿಷ್ಟೇ, ತಮ್ಮ ಶಿಷ್ಯರು ಅರ್ಥಮಾಡಿಕೊಂಡಿರುವುದಕ್ಕಿಂತಲೂ ಬಹಳ ದೊಡ್ಡವರು ಶ್ರೀರಾಮಕೃಷ್ಣರು. ಅವರು ಅನಂತ ಮಾರ್ಗಗಳಲ್ಲಿ ಬೆಳೆಯಬಲ್ಲ ಅಪಾರ ಆಧ್ಯಾತ್ಮಿಕ ಭಾವನೆಗಳ ಮೂರ್ತರೂಪ. ಬ್ರಹ್ಮಜ್ಞಾನದ ಒಂದು ಮಿತಿಯನ್ನು ಒಂದು ವೇಳೆ ಯಾರಾದರೂ ಕಂಡುಹಿಡಿಯಬಲ್ಲರು; ಆದರೆ ನಮ್ಮ ಗುರುದೇವನ ಮನಸ್ಸಿನ ಅಗಾಧವಾದ ಆಳವನ್ನು ಯಾರೂ ಅಳೆಯಲಾರರು."

ಅನಂತ ಆಧ್ಯಾತ್ಮಿಕ ಭಾವನೆಗಳ ಮೂರ್ತರೂಪವಾದ ಅವತಾರ ಘಟಿಸಬೇಕಾದರೆ ಶತಮಾನಗಳೇ ಬೇಕು. ಅಸಂಖ್ಯಾತ ಸಂಸ್ಥೆಗಳ ಮತ್ತು ಧಾರ್ಮಿಕ ಪರಂಪರೆಗಳ ಮೂಲಕ ಋಷಿ ಸಂತರ, ಕಲಾವಿದರ, ಚಿಂತಕರ, ತತ್ತ್ವಜ್ಞಾನಿಗಳ ಮತ್ತು ಸಮಾಜದ ನೇತಾರರ ಸೃಜನಶೀಲ ಮನಸ್ಸುಗಳ ಮೂಲಕ ಅವರ ವಿಚಾರಗಳು ದುಃಖತಪ್ತ ಮನುಕುಲಕ್ಕೆ ಸ್ಫೂರ್ತಿ ತುಂಬುತ್ತ, ಸಂತೈಸುತ್ತ ಮತ್ತು ಮಾರ್ಗದರ್ಶನ ನೀಡುತ್ತ ಬಹು ದೀರ್ಘ ಕಾಲದವರೆಗೆ, ಮನುಕುಲದ ಕಟ್ಟ ಕಡೆಯ ವ್ಯಕ್ತಿಯೂ ಅಮೃತತ್ವದ ದ್ವಾರವನ್ನು ಕ್ಷೇಮವಾಗಿ ದಾಟಿಹೋಗುವವರೆಗೆ ಅಭಿವ್ಯಕ್ತವಾಗಿವೆ — ಈ ಅರ್ಥದಲ್ಲಿ ಶ್ರೀರಾಮಕೃಷ್ಣರ ಜೀವನ, ಕಾರ್ಯಗಳು ಈಗ ತಾನೆ ಪ್ರಾರಂಭವಾಗಿವೆ ಎಂದು ಹೇಳಬಹುದು.

ಶ್ರೀರಾಮಕೃಷ್ಣರ ಭಕ್ತನೊಬ್ಬನ ಪಾಲಿಗೆ, ಅವನ ಬದುಕಿನ ಅತ್ಯಂತ ಮುಖ್ಯ ಸಮಸ್ಯೆಯೆಂದರೆ, ನಿಜವಾದ ಶ್ರೀರಾಮಕೃಷ್ಣರನ್ನು ಹೇಗೆ ಅನ್ವೇಷಿಸುವುದು ಎಂಬುದು. ಅವರ ನಿಜವಾದ ಭಕ್ತ ಅವರ ಬದುಕು, ಬೋಧನೆಗಳ ಓದುವಿಕೆ, ಕೇಳುವಿಕೆಗಳಿಂದ ಮಾತ್ರ ಸಂತೃಪ್ತನಾಗಿ ಕೂರುವುದಿಲ್ಲ. ಹೀಗೆ ಸಂಪಾದಿಸಿದ ಜ್ಞಾನವನ್ನು ಉಪಯೋಗಿಸಿಕೊಂಡು, ಈ ಜ್ಞಾನ ಕೇವಲ ಯಾವುದರ ಒಂದು ನೆರಳೋ ಆ ಮೂಲ ಸತ್ಯವನ್ನು ಹುಡುಕತೊಡಗುತ್ತಾನೆ. ಈ ಅನುಭಾವಿಕ ಅನ್ವೇಷಣೆ ಚೈತನ್ಯಜಗತ್ತಿನ ಹೆಬ್ಬಾಗಿಲಾದ ತನ್ನ ಆತ್ಮದ ಆಳಕ್ಕೆ ತನ್ನನ್ನು ಕರೆದೊಯ್ಯುವುದನ್ನು ಅವನು ಬಹು ಬೇಗನೆ ಕಂಡುಕೊಳ್ಳುತ್ತಾನೆ. ನಿಜವಾದ ಶ್ರೀರಾಮಕೃಷ್ಣರನ್ನು ನಾವು ಹುಡುಕಬೇಕಾದುದು ಅಲ್ಲಿ.

ನಿಜವಾದ ಶ್ರೀರಾಮಕೃಷ್ಣರು ಅಜ್ಞಾತರಾದರೂ ಅಜ್ಞೇಯವಾದವರಲ್ಲ. ನಿಜಕ್ಕೂ ಅವರನ್ನು ಅರಿಯುವುದು ಸಾಧ್ಯ – ಅವರಾಗಿ ಸ್ವತಃ ತಮ್ಮನ್ನು ಪ್ರಕಟಿಸಿಕೊಂಡರೆ ಮಾತ್ರ. ಅವರು ಪ್ರಾಮಾಣಿಕ ಅಭೀಪ್ಸೆಯುಳ್ಳವನಿಗೆ ಅವನ ಹೃದಯದ ನಿಗೂಢ ಆಳಗಳಲ್ಲಿ ತಮ್ಮನ್ನು ತಾವು ತೋರಿಕೊಂಡು, ಆ ಆತ್ಮದ ಅನಾದಿಯಾದ ಹಂಬಲಗಳನ್ನು ಈಡೇರಿಸುತ್ತಾರೆ. ಅವತಾರವು ತನ್ನನ್ನು ಧನ್ಯರಿಗೆ ಪ್ರಕಟಗೊಳಿಸಿಕೊಂಡು, ಅವರನ್ನು ಅಸತ್ಯದಿಂದ ಸತ್ಯಕ್ಕೆ, ಕತ್ತಲೆಯಿಂದ ಬೆಳಕಿಗೆ ಮತ್ತು ಮೃತ್ಯುವಿನಿಂದ ಅಮೃತತ್ವಕ್ಕೆ ಕರೆದೊಯ್ಯುವ ವಿಧಾನಗಳು ವಿವಿಧವೂ ನಿಗೂಢವೂ ಆಗಿರುತ್ತವೆ. ಇಂಥ ಧನ್ಯ ಜೀವಿಗಳಿಗೆ ಕೂಡ ಶ್ರೀರಾಮಕೃಷ್ಣರ ಬಗೆಗೆ ಏನನಿಸುತ್ತದೆ ಎಂಬುದನ್ನು, ನಿಶ್ಚಿತವಾಗಿ ಅಂಥವರಲ್ಲೊಬ್ಬರಾದ ಸ್ವಾಮಿ ಅಭೇದಾನಂದರು ಪದ್ಯವೊಂದರಲ್ಲಿ ಹೀಗೆ ಹೇಳುತ್ತಾರೆ: "ಪ್ರಭು, ನಿಮ್ಮ ನೈಜಸ್ವರೂಪವನ್ನು ನಾನರಿಯೆ. ನೀವು ನಿಮ್ಮನ್ನು ಪ್ರಕಾಶಗೊಳಿಸಿಕೊಳ್ಳುವ ಸತ್ಯ ಯಾವುದೇ ಆಗಿರಲಿ, ಅದಕ್ಕೆ ನನ್ನ ನಮನಗಳನ್ನು ಮತ್ತೆ ಮತ್ತೆ ಸಮರ್ಪಿಸುತ್ತೇನೆ."

## ಚಿಂತನ ಪ್ರಭ

### ಮಹಾವಿಭೂತಿ

ನಾವು ಇಂದು ವೈಜ್ಞಾನಿಕ ಯುಗದಲ್ಲಿ ಇರುವೆವು. ಪ್ರತಿವರುಷವೂ ಕಣ್ಣನ್ನು ಕೋರೈಸುವ ಹೊಸ ಹೊಸ ನಿಯಮಗಳನ್ನು ವಿಜ್ಞಾನಿಗಳು ಪ್ರಕೃತಿಯ ಭಂಡಾರದಿಂದ ಹೊರತೆಗೆಯುತ್ತಿರುವರು. ಅಲ್ಲಾವುದ್ದೀನನ ಕೈಯಲ್ಲಿರುವ ಮಾಯಾದೀಪದಂತೆ ಇದು ಇದೆ. ಇದನ್ನೆಲ್ಲ ನೋಡಿದರೆ ರೋಮಾಂಚನವೇನೋ ಆಗುವುದು, ಜನರ ಕಣ್ಮನಗಳನ್ನು ಮುಗ್ಧಗೊಳಿಸುವುದು. ಇದು ಬಾಹ್ಯ ಸಂಪತ್ತನ್ನು ಹೆಚ್ಚಿಸುವುದು. ಆದರೆ ಜಗತ್ತಿಗೆ ಇದರಿಂದ ಶಾಂತಿ ಎಷ್ಟು ಲಭಿಸಿದೆ? ಪರಸ್ಪರ ಸೌಹಾರ್ದ ಎಷ್ಟು ಉಂಟಾಗಿದೆ? ಮಾನವನು ಮೃಗಕ್ಕಿಂತ ಎಷ್ಟು ಮೇಲಕ್ಕೆ ನೈತಿಕ ಮಟ್ಟದಲ್ಲಿ ಏರಿರುವನು? ಈ ಪ್ರಶ್ನೆಗಳನ್ನು ಹಾಕಿದಾಗ ನಾವು ನಾಚಬೇಕಾಗುವುದು. ಹಿಂದೆ ಜನರು ಕೋಲು, ಕಲ್ಲುಗಳಿಂದ ಕಾದಾಡುತ್ತಿದ್ದರು. ಇಂದು ಬಾಂಬು ಬಂದೂಕುಗಳಿಂದ ಕಾದಾಡುವರು. ನಮ್ಮ ನಾಗರಿಕತೆ ಹೊರಗೆ ಮೆರುಗು ಕೊಡುವುದಾಗಿದೆಯೇ ಹೊರತು, ಮಾನವ ಜೀವನದ ಅಂತರಾಳವನ್ನು ಪ್ರವೇಶಿಸಿಲ್ಲ. ಈ ಬಾಹ್ಯ ಜಗತ್ತನ್ನು ಮೀರಿದ ಮತ್ತೊಂದು ಜಗತ್ತಿದೆ. ಅದೇ ಮನುಷ್ಯನ ಆಂತರಿಕ ಜಗತ್ತು. ಕಾಮ, ಕ್ರೋಧಗಳೆಂಬ ಮಹಾಜ್ವಾಲೆ ಅಲ್ಲಿ ಉರಿಯುತ್ತಿದೆ. ಯಾರು ಇದನ್ನು ಮೀರಿಹೋಗಿರುವರೋ, ಭಗವಂತನಲ್ಲಿ ಐಕ್ಯರಾಗಿರುವರೋ, ಅವರಿಂದ ಮಾತ್ರ ಶಾಂತಿ ಸೌಹಾರ್ದ ನೆಲೆಸುವುದಕ್ಕೆ ಸಾಧ್ಯ. ಇಂತಹ ಮಹಾವಿಭೂತಿ ವ್ಯಕ್ತಿ ಶ್ರೀರಾಮಕೃಷ್ಣರು. ಅವರು ಒಂದು ವ್ಯಕ್ತಿ ಮಾತ್ರವಲ್ಲ, ಅನಂತ ಶಕ್ತಿಯ ಗಣಿ. ಅವರು ತಾವು ಮಾತ್ರ ಭವಸಾಗರವನ್ನು ದಾಟಲಿಲ್ಲ, ಮುಂದೆ ಬರುವ ಜನಾಂಗ ಅದನ್ನು ದಾಟುವುದಕ್ಕೆ ಒಂದು ನಾವೆಯಂತೆ ಅವರ ಜೀವನ ಮತ್ತು ಸಂದೇಶ ನಿಂತಿವೆ. ಇಂತಹ ಪುಣ್ಯವಂತನಿಗೆ ಜನ್ಮವೆತ್ತ ಕುಲ ಪವಿತ್ರ, ಹೆತ್ತ ತಾಯಿ ಧನ್ಯಳು, ಅವರ ಪಾದಧೂಳಿ ಸೋಂಕಿದ ನೆಲ ಪುಣ್ಯಭೂಮಿ.

–ಸ್ವಾಮಿ ಸೋಮನಾಥಾನಂದ (ಆಧಾರ: ದಿವ್ಯತ್ರಯರು)